Doc 4

Fonuded 1917 ॥ ಶ್ರೀ ॥ Regd No·M 1299

# SATYAVADI "ಸತ್ಯವಾದಿ"

29—4—42 ಎ ಸೆಕ್ಷನ್

ಸಂಪುಟ ೨೫] [ಸಂಚಿಕೆ ೩೫ 29-4-42 [ಎ. ಬಿ. ಸೆಕ್ಷನ್ ಒಟ್ಟು ೮ ಪುಟ

8 ಆಣೆಗೆ
3
ಕೂಪನ್‌ಗಳು

# ಆನಂದವಿಹಾರ. ನಂ. 21

ರೂಪಾಯಿ
300
ಬಹುಮಾನ

**ಪ್ರಥಮ ಬಹುಮಾನ ೧೫೦ ರೂ.** **ಇತರ ಬಹುಮಾನ ೧೦೦ ರೂ.** **ಇದಲ್ಲದೆ ಪ್ರೋತ್ಸಾಹನೆ ಬಹುಮಾನಗಳು.**

ಸರಿಯಾದ ಉತ್ತರ 13—5—42
"ತಾಯಿನಾಡು" "ಸತ್ಯವಾದಿ"
ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತೆ.

ಎಲ್ಲರಿಗಿಂತಲೂ ಹೆಚ್ಚಿಗೆ ಕೂಪನ್
ಒಂದೇ ಹೆಸರಿನಲ್ಲಿ ಕಳುಹಿಸಿದವರಿಗೆ
ಸ್ಪೆಷಲ್ ಬಹುಮಾನ
**ಒಂದು ಸುಂದರ ಕೈ ಗಡಿಯಾರ**

ನಿಮ್ಮ ಊರಿನಲ್ಲಿ ಪೋಸ್ಟು ಮಾಡ
ಬಹುದಾದ ಕೊನೆಯ ದಿನ
11—5—42

## ಕುರುಹುಗಳು

ಎಡದಿಂದ ಬಲಕ್ಕೆ— 1 ಅಹಿಂಸಾ ತತ್ವವನ್ನು ಪ್ರಪಂಚಕ್ಕೇ ಬೋಧಿಸುತ್ತಿರುವ ಮಹಾತ್ಮ. 6 ಮಾನವನಿಗೆ ಇದರಲ್ಲಿ ಯಾವುದು ಕೊರತೆಯಾಗಿದ್ದರೂ ಆತನ ಜೀವಿತವು ಸುಖಮಯವಾಗಿರುವುದಿಲ್ಲ. 7 ಆಕಳು 8 ಯಾವ ಕೆಲಸದ ಆರಂಭದಲ್ಲಿ ಮನಸ್ಸಿನಲ್ಲಿ ಇದನ್ನು ಇಟ್ಟುಕೊಂಡು ಆರಂಭಿಸಿದರೆ ಅದು ಸಫಲವಾಗುವುದಿಲ್ಲ. 10 ಇಂದಿನ ಯುದ್ಧವು ನಡೆಯುತ್ತಿರುವುದು ಇದರ ಮೇಲೆ ಜಾಸ್ತಿ. 11 ಜಗಳ. 13 ಇವರು ಚಲನಚಿತ್ರ ಪ್ರಪಂಚದಲ್ಲಿ ಹೆಸರು ಪಡೆಯಬೇಕಾದರೆ ದಿಗ್ದರ್ಶಕರ ಕೈವಾಡದಿಂದಲೇ. 17 ನಮ್ಮ "ಆನಂದವಿಹಾರ"ದ ಎಲ್ಲಾ ವಿಷಯಕ್ಕೂ ಈ ಪತ್ರಿಕೆ ನೋಡಿ.

ಮೇಲಿನಿಂದ ಕೆಳಕ್ಕೆ — 1 ಮಾನವ ಕುಲದಲ್ಲಿ ಭೇದವನ್ನು ಕಲ್ಪಿಸುವುದಕ್ಕೆ ಇದು ಒಂದು ಸಾಧನ 2 ನುಡುವೆಯ ಮನೆಯಲ್ಲಿ ಇದಕ್ಕೆ ಕೊರತೆಯೇ? 3 "ಆತ್ಮ" [ಹಿಂದುಮುಂದಾಗಿದೆ] 4 ಭಾರತದ ಸುಪ್ರಸಿದ್ಧ ಬೆಟ್ಟ. 5 ಹೆಸರು ಪಡೆದ ಸಿನಿಮಾ ನಟಿ (ಕಣ್ಣುಮುಚ್ಚಾಲೆಯಲ್ಲಿ ಈಕೆಯ ಅಭಿನಯ ಚೆನ್ನಾಗಿದೆ) 7 ಶ್ರೀ ಕೃಷ್ಣನಿಗೆ ಈ ಹೆಸರೂ ಉಂಟು. 8 ಇದರ ಅವಶ್ಯಕತೆ ಎಲ್ಲರಿಗೂ ಇದೆ 9 ಹಿಟ್ಲರನ ಅವಾಂತರಕ್ಕೆ ಸಿಕ್ಕಿದ ಅನೇಕ "— —" ಗಳು ಬಹಳ ಸಂಕಟಕ್ಕೆ ಈಡಾಗಿವೆ. 11 ಬಡವರಲ್ಲಿ ಇದನ್ನು ಶೋಧಿಸಬೇಕು. 12 ನಮ್ಮ "ದಿಗ್ದರ್ಶಕರು" ಚಿತ್ರವನ್ನು ದಿಗ್ದರ್ಶಿಸುವ ಮೊದಲು ಇದನ್ನು ಚನ್ನಾಗಿ ತಿಳಿದುಕೊಂಡು ಆರಂಭಿಸುವುದು ಮೇಲು. 14 ಒಂದು ವಿಧವಾದ ಕತ್ತಿ. 15 ಇವರು ಪೂಜಾ ಅರ್ಹರಲ್ಲವೇ? 16 ಇಂದಿನ ಯುದ್ಧದಲ್ಲಿ ಇವರ ಸೇವೆ ಜಾಸ್ತಿಯಾಗಿ ಬೇಕಾಗಿದೆ.



ಕೂ. ನಂ. ...............



ಕೂ. ನಂ. ...............



ಉ. ಕೂ. ನಂ. ...............

ನಿಬಂಧನೆಗಳಿಗೂ ಮ್ಯಾನೇಜರು ಮಾಡುವ ನಿರ್ಣಯಕ್ಕೂ ಬದ್ಧನಾಗಿರುತ್ತೇನೆ.

**21**

ಹೆಸರು..........................................................

ವಿಳಾಸ.......................................................................... ಪೋ. ಆ. ನಂ. ...............

ಪ್ರತಿ ಕೂಪನ್‌ಗೂ ನಾಲ್ಕಾಣೆ ಮಾತ್ರ. ಮೂರು ಚದರಗಳಿಗೆ ಎಂಟಾಣೆ. ಮೂರಕ್ಕಿಂತ ಕಡಿಮೆ ಅಂಗೀಕರಿಸುವುದಿಲ್ಲ. ಕೂಪನ್‌ಗಳನ್ನು ಬಿಳಿ ಕಾಗದದ ಮೇಲೆ ಕಾಪಿಮಾಡಿ ಕಳುಹಿಸಲೂಬಹುದು. ಮ್ಯಾನೇಜರ್ ಮಾಡುವ ನಿರ್ಣಯಕ್ಕೆ ಎಲ್ಲರೂ ಬದ್ಧರಾಗಿರಬೇಕು. ಪತ್ರವ್ಯವಹಾರಕ್ಕೆ ಅವಕಾಶವಿಲ್ಲ. ಬಾಕಿ ನಿಯಮಗಳು ಮಾಮೂಲಿನಂತೆ.

ವಿ ಸೂಚನೆ:—ಪೋಸ್ಟಲ್ ಆರ್ಡರ್ ಬರೆಯುವವರು "**ಪೇ**" ಅನ್ನುವ ಜಾಗದಲ್ಲಿ "ಮ್ಯಾನೇಜರ್, ಆನಂದವಿಹಾರ" ವೆಂದು ಪೋಸ್ಟಾಫೀಸ್ ಬಳಿ "ಮೈಸೂರು" ಎಂದು ಮಾತ್ರ ಬರೆಯಬೇಕು ಕೂಪನ್‌ಗಳನ್ನು ಶಾಯಿನಿಂದ ತು

ನಿಮ್ಮ ಪ್ರವೇಶಧನ ಮತ್ತು ಕೂಪನ್ ಕಳುಹಿಸುವ ವಿಳಾಸ —

**ಮ್ಯಾನೇಜರ್ ಆನಂದ ವಿಹಾರ, C/0 ಮೊಕ್ತಾರ್ ಅಂಡ್ ಕಂಪನಿ, ಸರ್ದಾರ್ ಬಜಾರು, ಮೈಸೂರು.**

[ಮೈಸೂರಿನವರು—ಮೇಲ್ಕಂಡ ವಿಳಾಸದಲ್ಲಿ ಪಾವತಿಮಾಡಿ ರಶೀತಿ ಪಡೆ.

**ಈ ವಾರದ ಕಥೆ**

# ?

ಲೇ.–ಯಸ್. ವಿ. ಕೃಷ್ಣಸ್ವಾಮಿ, ಮೈಸೂರು.

ನಾನು ಚಿಕ್ಕಂದಿನಲ್ಲಿಯೇ ನನ್ನ ತಂದೆ ತಾಯಿಗಳನ್ನು ಕಳೆದುಕೊಂಡು ಅನಾಥನಾದೆನು. ನಾನು ನನ್ನ ತಂದೆಗೆ ಕೊನೆಯ ಮಗ. ಬಹಳ ಪ್ರಯಾಸದಿಂದ ನಾನು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದೆ. ಅನಂತರ ನಾನು ಕಲ್ಕತ್ತಾ ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಇಂಟರ್‌ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದೆ. ನಾನು ನನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲು ಚಿಕ್ಕ ಹುಡುಗರಿಗೆ ಪಾಠವನ್ನು ಹೇಳಿ ನನ್ನ ಜೀವನಪಥ ಹಾಗೂ ನನ್ನ ವ್ಯಾಸಂಗ ಸಾಗಿಸಬೇಕಾಗಿತ್ತು. ಇದು ಬಹಳ ಕಷ್ಟತರವಾಗಿ ತಿಳಿದುಬಂದರೂ ನಾನು ಪದವೀಧರನಾಗಬೇಕೆಂಬ ಕುತೂಹಲ ನನ್ನನ್ನು ಇದರಿಂದ ಬಿಡಿಸಲು ಆಗತ್ತಿರಲಿಲ್ಲ. ಹೀಗೆಯೇ ಇರಲು ಕಲ್ಕತ್ತಾ ಪಟ್ಟಣದಲ್ಲಿ ಓರ್ವ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿಯು ಬಹಳ ದಯಾಳಿ ಮತ್ತು ಉದಾರ ಸಹಾಯ ಮಾಡುವವಳೆಂಬುದು ತಿಳಿಯಬಂತು. ನಾನು ಆಕೆಯನ್ನು ನೋಡಿ ಸಹಾಯ ಪಡೆಯಲು ಹೋದೆ. ಆಕೆಗೆ ನಲವತ್ತು ನಲವತ್ತೈದು ವರ್ಷ ಇರಬಹುದು. ಆಕೆಗೆ ಈ ಪ್ರಪಂಚದಲ್ಲಿ ತಾನು ಸಾಕಿಕೊಂಡಿರುವ 7–8 ವರ್ಷದ ಒಂದು ಹುಡುಗಿ ಹೊರತು ಯಾರೂ ಇರಲಿಲ್ಲ. ಬೇಕಾದಷ್ಟು ಆಸ್ತಿವಂತಳು. ಆ ವರ್ಷದಲ್ಲಿಯೇ ಆಕೆಯು ಇದ್ದ ಹೈಸ್ಕೂಲು ಕಾಲೇಜಾಗಿ ಮಾರ್ಪಟ್ಟದ್ದರಿಂದ ಆಕೆಯು ಕಾಲೇಜಿನ ಪ್ರಿನ್ಸಿಪಾಲ್ ಆಗಿ ನೇಮಕವಾದಳು. ಆಕೆಗೆ ಅಷ್ಟು ವಯಸ್ಸಾಗಿದ್ದರೂ ಆಕೆಯು ನೋಡುವುದಕ್ಕೆ ಚಿಕ್ಕವಳಾಗಿಯೇ ಕಾಣುತ್ತಿದ್ದಳು. ಮತ್ತು ಸುಂದರಳೂ ಚತುರಳೂ ಆಗಿದ್ದಳು. ಆಕೆಯ ಅಂಗಾಂಗಗಳೆಲ್ಲಾ ಒಳ್ಳೆಯ ನವಯೌವನದಿಂದ ತುಂಬಿ ಒಳ್ಳೆ ಆರೋಗ್ಯಕಾಯವಾಗಿದ್ದಿತು. ಆಕೆಯು ಪ್ರತಿನಿತ್ಯವೂ ಬ್ಯಾಡ್‌ಮಿಂಟನ್ ಆಡುವುದರಿಂದ ಈ ರೀತಿ ತನ್ನ ದೇಹವನ್ನು ಕಾಪಾಡಿಕೊಂಡಿರುವಳೆಂದು ಕೊನೆಗೆ ನನಗೆ ತಿಳಿಯಿತು. ನನಗೆ ಎಲ್ಲಿಯೂ ಸರಿಯಾದ ಆಸರೆ ದೊರೆಯದೆ ಇರಲು ನಾನು ಮಿಸ್ ಸರ್ಕಾರ್ ಹತ್ತಿರ ಹೋದೆ. ರಾಷ್‌ಬಿಹಾರಿ ರಸ್ತೆಯಲ್ಲಿ ಒಳ್ಳೇ ಎರಡಂತಸ್ತಿನ ಮಹಡಿ ಮನೆ; ಮನೆಯ ಮುಂದೆ ಪಡಸಾಲೆಯಲ್ಲಿ ಒಂದು ಚಿಕ್ಕ ಹುಡುಗಿ ನಿಂತಿತ್ತು. ನಾನು ಮಿಸ್ ಸರ್ಕಾರ್ ಒಳಗೆ ಇರುವುದೆಂಬುದನ್ನು ಆ ಹುಡುಗಿಯಿಂದ ತಿಳಿದುಕೊಂಡೆ. ನಂತರ ಆ ಹುಡುಗಿಯು ಸಂಗಡ ಓರ್ವ ಕಾಲೇಜಿನ ತರುಣನು ಕಾಣಲು ಕಾತುರನಾಗಿರುವನೆಂದು ಒಳಕ್ಕೆ ಹೇಳಿ ಕಳುಹಿಸಿದೆನು. ನನ್ನನ್ನು ಆಕೆಯು ನೋಡಿದ ಕೂಡಲೇ ಆದರದಿಂದ ಬರಮಾಡಿಕೊಂಡು, ನನ್ನ ಆಗಮನದ ವಿಷಯವನ್ನು ಪ್ರಸ್ತಾಪಿಸಿದಳು. ನಂತರ ತನ್ನ ಸಾಕು ಮಗಳಿಗೆ ಓರ್ವ ಉಪಾಧ್ಯಾಯರು ಬೇಕಾಗಿರುವುದಾಗಿ ತಿಳಿಸಲು, ನಾನು ಆ ಕೆಲಸವನ್ನು ನಿರ್ವಹಿಸಲು ಒಪ್ಪಿದೆ. ನಂತರ ಆಕೆಯು ಒಪ್ಪಿ ನನ್ನನ್ನು ಅಲ್ಲಿಯೇ ಇಟ್ಟುಕೊಂಡಳು. ಇರುವುದಕ್ಕೆ ಸರಿಯಾದ ಕೊಠಡಿ, ಓದುವುದಕ್ಕೆ ಸರಿಯಾದ ಸಲಕರಣೆ ಮುಂತಾದುವೆಲ್ಲಾ ಒದಗಿಸಿದ್ದು ಅಲ್ಲದೆ, ಆಕೆಯು ಕಾಲೇಜಿನ ಅಧ್ಯಾಪಕಳಾದುದರಿಂದ ನನ್ನ ವ್ಯಾಸಂಗಕ್ಕೂ ಬಹಳ ಅನುಕೂಲ ಕಲ್ಪಿಸಿಕೊಟ್ಟಳು.

ನಂತರ ಕೆಲವು ದಿವಸಗಳು ಅಲ್ಲಿಯೇ ಇರಲು ನಾನು ಕಾಲೇಜಿಗೆ ಸೇರಿದೆ. ಆಕೆಯ ಸಹಾಯದಿಂದ ನನಗೆ ಕಾಲೇಜಿನ ಫೀಜು ಮಾಫಾಯ್ತು. ನಾನು ಮಿಸ್ ಸರ್ಕಾರ್ ಮತ್ತು ಶಾಂತಳ ಜೊತೆಯಲ್ಲಿಯೇ ಊಟ ಮಾಡುತ್ತಿದ್ದೆ. ನಾನು ಇವರ ಮನೆಯಲ್ಲಿ ಅವರಿಗೆ ಹೊಂದಿಕೊಂಡು ಇದ್ದುದರಿಂದ ಬಹಳ ಸರಳವಾಗಿ ಜೀವನ ಯಾತ್ರೆಯು ಸಾಗುತ್ತಿತ್ತು. ಕೆಲವು ಸಮಯದಲ್ಲಿ ಶಾಂತಳು ಗ್ರಾಮಾಫೋನ್ ಹಾಕುತ್ತಾ ಇದ್ದಾಗ ಮಿಸ್ ಸರ್ಕಾರಳು ನನ್ನನ್ನು ಆಕೆಯ ಕೊಠಡಿಯ ಒಳಕ್ಕೆ ಕೂಗುತ್ತಿದ್ದಳು. ಆಕೆ ಆಕೆಯು ಕಲೆ, ಸಿನಿಮಾ, ಪಾಲಿಟಿಕ್ಸ್ ಮುಂತಾದ ವಿಷಯಗಳಲ್ಲಿ ಚರ್ಚಿಸುತ್ತಿದ್ದಳು. ಹೀಗೆಯೇ ಇರಲು ಒಂದು ಬಾರಿ ಮಿಸ್ ಸರ್ಕಾರಳು ಖಾಯಿಲೆ ಮಲಗಿದಳು. ಆಗ ಆಕೆಗೆ ಬಹಳ ತಲೆನೋವು ಶುರುವಾಯ್ತು. ಆಕೆಗೆ ಮನೆಯಲ್ಲಿ ದಾದಿಯರು ಇದ್ದರೂ ಕೂಡ ಆಕೆಯು ನನ್ನನ್ನು ಅವಳು ಮಲಗುವ ಕೊಠಡಿಗೆ ಕರೆದು ತಲೆಯನ್ನು ಸ್ವಲ್ಪ ಒತ್ತಬೇಕಾಗಿ ಕೇಳಿದಳು. ನಾನು ಅದೇ ರೀತಿ ಮಾಡಿದೆ. ಆಗ ಆಕೆಯು ನನ್ನ ಶಿರೋಭಾವವು ನಿನ್ನ ಕರಸ್ಪರ್ಶದಿಂದ ಕಮ್ಮಿಯಾಗಿದೆ. ಆದರೆ ನನಗೆ ಮೈಯಲ್ಲಾ ನೋವು ಶುರುವಾಗಿದೆ. ಏನು ಕಾರಣವೋ ತಿಳಿಯದು, ಬಹುಶಃ ನಾನು ಕಾಲೇಜಿನಲ್ಲಿ ಬಹಳ ಹೊತ್ತಿನವರಿಗೆ ಕುರ್ಚಿಯ ಮೇಲೆ ಕೂತಿರುವುದೇ ಕಾರಣವಾಗಿರಬೇಕು ಎಂದು ಸಂಕಟಪಡುವುದಕ್ಕೆ ಶುರು ಮಾಡಿದಳು.

ಆಗ ಅದು ನಿಜವೇನೋ ಎಂದು ತಿಳಿದು ನಾನು ಮೈಯನ್ನೆಲ್ಲಾ ಒತ್ತಬಹುದೇ ಎಂದು ಕೇಳಿದ್ದಕ್ಕೆ ಆಕೆಯು ನನ್ನ ಉಪಕಾರಕ್ಕೆ ಸಮ್ಮತಿಸಿದಳು. ನಾನು ಮೊದಲು ಆಕೆಯ ತೋಳು ಮತ್ತು ಕೈಗಳನ್ನು ಅಮುಕಿದ ಮೇಲೆ ಕಾಲನ್ನು ಒತ್ತಲು ಶುರುಮಾಡಿದೆ. ಪ್ರಾಣ್ ನಾನು ಮೊದಲೆ ಹೇಳಲಿಲ್ಲವೆ ನನಗೆ ಸೊಂಟ ನೋವು ಜಾಸ್ತಿಯಾಗಿದೆಯೆಂದು, ನನಗೆ ಕೈ ಅಥವಾ ಕಾಲುಗಳಲ್ಲಿ ನೋವಿಲ್ಲವೆಂದು ಹೇಳಿದಳು. ಆದರೆ ನಾನು ನಾಚಿಕೆಯಿಂದ ಸೊಂಟದ ಮೇಲೆ ಕೈಯಾಡಿಸುವಾಗ ಹೆದರಿ ಕೈಯನ್ನು ಹಿಂದಕ್ಕೆ ತೆಗೆಯುತ್ತಿದ್ದೆ. ಆಗ ಆಕೆಯು ಏನು ನನಗೆ ನೋವಿಲ್ಲದೇ ಇರುವ ಜಾಗದಲ್ಲಿ ಏತಕ್ಕೆ ಅಮುಕುತ್ತೀಯ ಎಂದು ಹೇಳಿ ನನ್ನ ಕೈಯನ್ನು ಆಕೆಯು ಎಳೆದುಕೊಂಡು ತನಗೆ ಇಷ್ಟಬಂದ ಕಡೆಯಲ್ಲಿ ಇಟ್ಟುಕೊಂಡು ಅಮುಕಿಕೊಳ್ಳುತ್ತಿದ್ದಳು. ಆಗ ನನಗೆ ನಾಚಿಕೆಯುಂಟಾದರೂ ಒಂದು ವಿಧವಾದ ಭಯ ನನ್ನನ್ನು ಮುತ್ತಿತ್ತು. ಹೀಗೆಯೇ ಕೆಲವು ವೇಳೆ ಕೈಯಾಡಿಸುವಾಗ ನನ್ನ ಕೈಗಳು ಆಕೆಯ ಮರ್ಮಸ್ಥಳಗಳ ಮೇಲೆ ಹೋಗುತ್ತಿದ್ದುವು. ಆಗ ಆಕೆಯು ಆಹಾ! ನಿನ್ನ ಸ್ಪರ್ಶದಿಂದ ನನ್ನ ಮೈಯ ಭಾರವೆಲ್ಲಾ ಕಡಿಮೆಯಾಗುತ್ತಿದೆ ಎಂದು ಸಂತೋಷಿಸುತ್ತಿದ್ದಳು

( ಮುಂದುವರಿಯುವುದು. )

---

## ವಿನೋದ ರಂಜಿನಿ ನಂ. 4 ಬಹುಮಾನ ರೂ. 40

ಪ್ರವೇಶಧನ 1 ಉತ್ತರಕ್ಕೆ 2 ಆಣೆ, 3 ಉತ್ತರಗಳಿಗೆ 4 ಆಣೆ ಉತ್ತರ ತಲುಪಿಸಲು ಕಡೇ ತಾ. 3-5-42

ಮೊದಲನೆ ಬಹುಮಾನ ರೂ. 25. ಇತರ ಬಹುಮಾನ ರೂ. 15.

ಸರಿಯಾದ ಉತ್ತರ 6–5–42 ನೇ ಸತ್ಯವಾದಿಯಲ್ಲಿ ಪ್ರಕಟಿಸಲ್ಪಡುವುದು.

ನಿಬಂಧನೆಗಳು ಮಾಮೂಲಿನಂತೆ. ಎಲ್ಲರೂ ಮ್ಯಾನೇಜರ ತೀರ್ಮಾನಕ್ಕೆ ಬದ್ಧರಾಗಿರಬೇಕು.

ತಾ|| 22-4-42ನೇ ಸತ್ಯವಾದಿ ಪತ್ರಿಕೆ ನೋಡಿ.

ಮ್ಯಾನೇಜರ್ ವಿನೋದರಂಜಿನಿ C/o ಸತ್ಯವಾದಿ ಆಫೀಸು, ಚಾಮರಾಜಪುರಂ, ಮೈಸೂರು

ಕೆಳಗೆ ಕೊಟ್ಟಿರುವ ಪದಗಳಲ್ಲಿ ಬಿಟ್ಟಿರುವ ಅಕ್ಷರಗಳನ್ನು ಸೂಚನೆಗಳಿಗನುಸಾರವಾಗಿ ಸೇರಿಸಬೇಕು

| ಪದಗಳು | ಸೂಚನೆ | ಉತ್ತರ |
|---|---|---|
| 1. — ವೇಕ | ಇದು ಮನುಷ್ಯನಿಗೆ ಒಂದು ಭೂಷಣ | |
| 2. — ರು — | ಇದು ಪೋಲೀಸಿನವರಿಗೆ ಎಷ್ಟು ಹೆಚ್ಚಾಗಿ ಸಿಕ್ಕಿದರೆ ಕಳ್ಳನನ್ನು ಪತ್ತೆ ಮಾಡಲು ಅಷ್ಟು ಅನುಕೂಲ. | |
| 3. — ನ | ಇದು ಭಂತಖಂಡದಲ್ಲಿ ಹೇರಳವಾಗಿದೆ | |
| 4, — ಕ್ತಿ | ಪರಮಾತ್ಮನನ್ನು ನಂಬದವರಿಗೆ ಇದಕ್ಕೆ ಸೊನ್ನೆಯಿಲ್ಲ. | |
| 5, — ರರು | ಆಹಾ! ಯುದ್ಧದಲ್ಲಿ ಎಂತೆಂತಹ ಜನರು ನುಡಿಯುತ್ತಾರೆ. | |
| 6, — ಣ | ಮನುಷ್ಯನಿಗೆ ಮಾನಸನ್ಮಾನ ತರುವ ಶಕ್ತಿ ಇದಕ್ಕಿದೆ. | |

ಹೆಸರು ಕೂ. ನಂ

ವಿಳಾಸ ಪೋ. ಆ. ನಂ.

# ಆನಂದವಿಹಾರ ನಂ. 20 ರಲ್ಲಿ

## ಬಹುಮಾನ ಪಡೆದವರ ಪಟ್ಟಿ

ಸರಿಯಾದ ಉತ್ತರ ಮತ್ತು ಒಂದು ತಪ್ಪಿನ ಉತ್ತರ ಯಾರಿಂದಲೂ ಬರಲಿಲ್ಲವಾದ್ದರಿಂದ ಎರಡು ತಪ್ಪಿನ ಉತ್ತರವನ್ನು ಕಳುಹಿಸಿದ್ದ ಒಬ್ಬರಿಗೇ ಪ್ರಥಮ ಬಹುಮಾನ ಕೊಟ್ಟಿದೆ. ಮೂರು ತಪ್ಪಿನ ಉತ್ತರಕ್ಕೆ ತಲಾ 5 ರೂಪಾಯಿಸಂತೆಯೂ ನಾಲ್ಕು ತಪ್ಪಿನ ಉತ್ತರಕ್ಕೆ ತಲಾ 1 ರೂ. ಸಂತೆಯೂ 5 ತಪ್ಪಿನ ಉತ್ತರಕ್ಕೆ ತಲಾ 8 ಆಣೆಯಂತೆಯೂ ಹಂಚಿದೆ.

ಪ್ರಥಮ ಬಹುಮಾನ— ಎರಡು ತಪ್ಪಿನ ಉತ್ತರಕ್ಕೆ.

ಶ್ರೀ ಜಿ. ಪಿ. ಅಯ್ಯಂಗಾರ್, ಮೈಸೂರು.

3 ತಪ್ಪಿನ ಉತ್ತರಕ್ಕೆ. ತಲಾ 5—0—0 ರೂ.

ಬೆಂಗಳೂರು. ಪಿ. ಕೃಷ್ಣಮೂರ್ತಿ. ಬಿ. ಸಾಂಬಶಿವಯ್ಯ. ಜಿ ನಾರಾಯಣಸ್ವಾಮಿ ಪಿ. ವೆಂಕಟಪತಿ. ಬೆಂಗಳೂರು ದಂಡು. ಎಂ. ಪಾರ್ವತಮ್ಮ. ಸುಂದರೀಬಾಯಿ. ಮೈಸೂರು. ಬಿ. ಎಂ. ಸಂಜೀವಯ್ಯ. ಎಸ್. ನಾರಾಯಣ ಪುತ್ತೂರು, ಎ. ಸರಸ್ವತೀಬಾಯಿ, ಪಿ. ಪಿ. ಪ್ರೇಮಕುಮಾರಿ ಮದ್ದೂರು, ಮುರುಗಪ್ಪ ಹಿರೇಮಠ ಗದಗ, ಗೋವಿಂದಪ್ಪ ಬಳ್ಳಾರಿ, ಶ್ರೀಮತಿ ಎ. ಸಿ. ಅಯ್ಯಪ್ಪ ಕೋಲಾರ, ಡಿ. ಸುಬ್ಬರಾಯರು ಮೈಸೂರ.

4 ತಪ್ಪಿನ ಉತ್ತರಕ್ಕೆ ತಲಾ ರೂ. 1-0-0

ಶ್ರೀಮತಿ ಎಸ್. ಗೌರಮ್ಮ ಚಿಕ್ಕಬಳ್ಳಾಪುರ ಶ್ರೀ ಎಂ. ಮಲ್ಲಾರರಾವ್ ಚಿಕ್ಕಮಗಳೂರು, ತಂತ್ರಿ ಶಾಮಭಟ್ಟ ಶೃಂಗೇರಿ, ಕೆ. ಆರ್. ನಾಗರಾಜರಾಜರಾವ್ ನಂಜನಗೂಡು ಎಂ. ಆರ್. ಅಣ್ಣಾಜಿರಾವ್ ಬೆಂಗಳೂರು, ಎಂ. ಎಸ್. ಗೋಪಾಲ್ ಬೊಂಬಾಯಿ, ಎಂ. ಕೆ ಚನ್ನಪ್ಪಯ್ಯ ಭದ್ರಾವತಿ ಜಿ. ಶ್ರೀನಿವಾಸರಾವ್ ತುಮಕೂರು, ಶಾರದಾಬಾಯಿ ಮೈಸೂರು.

5 ತಪ್ಪಿನ ಉತ್ತರಕ್ಕೆ ತಲಾ 0-8-0

ಎ ಎನ್ ಶಾಂತಾಬಾಯಿ ಮೈಸೂರು. ಬಿ. ಎಸ್ ನಂಜುಂಡಮೂರ್ತಿ ಚನ್ನಪಟ್ಟಣ, ಕೆ. ರುದ್ರಪ್ಪ ಶಿವಮೊಗ್ಗಾ, ಹೆಚ್ ಎನ್ ನರಸಿಂಹಮೂರ್ತಿ ಚಿಕ್ಕನಾಯ್ಕನಹಳ್ಳಿ, ಎಸ್ ಆರ್ ಶಂಭುಲಿಂಗಯ್ಯ ಸುಗ್ಗನಹಳ್ಳಿ, ಆರ್ ಸರೋಜಮ್ಮ ಮೈಸೂರು, ಎಂ ಎ ನರಸಿಂಹನ್ ಮೈಸೂರು ಜಿ ಎಸ್ ಜೋಯ್ಸರ್ ಮೈಸೂರು, ಆರ್ ನಾರಾಯಣ ಸ್ವಾಮಿ. ರಟ್ಟೀಹಳ್ಳಿ (ಸಾಗರ) ಆರ್ ಸಿ ಕಾಶೀರಾಯ ಭದ್ರಾವತಿ, ಜಿ ಕೆ ರುಕ್ಕಮ್ಮ ನಾಗಮಂಗಲ, ಶ್ರೀಮತಿ ಲಕ್ಷ್ಮೀದೇವಿ ಭದ್ರಾವತಿ ಪಿ ರಾಮಸ್ವಾಮಿ ನಂಜನಗೂಡು, ಟಿ ತಮ್ಮಯ್ಯ ಮೈಸೂರು, ಸಂಪಿಗೆ ಅನ್ನಪೂರ್ಣಮ್ಮ ಮೈಸೂರು, ಪಿ ಬಿ ಪಾರ್ಥಸಾರಥಿ ಮೈಸೂರು, ಎಂ ಪಿ ಕಮಲಮ್ಮ ಮೈಸೂರು ಡಿ ವಿ ನರಸಿಂಹಮೂರ್ತಿ ಮಂಡ್ಯ, ಬಿ ಸುಧಾಕರ ರಾವ್ ಕಾಸರಗೋಡ, ಸಿ ವಿ ರಾಮಯ್ಯಶೆಟ್ಟಿ ಚನ್ನಪಟ್ಟಣ, ಎಲ್ ಕೃಷ್ಣಶಾಸ್ತ್ರಿ ಮಾಲೂರು, ಕೆ ವೆಂಕಣ್ಣಭಟ್ಟ ನೆಲಮಂಗಲ, ಎಂ ಎಸ್ ರಾಮಸ್ವಾಮಿಯ್ಯಂಗಾರ್ ಮಳೂರು, ಆರ್ ಎಸ್ ವೇಣುಗೋಪಾಲ್ ಮೈಸೂರು. ವಿ ಪದ್ಮಾವತಮ್ಮ ಬೆಂಗಳೂರು ದಂಡು. ಕೆ ಎಸ್ ಪುಟ್ಟಣ್ಣ ಚಿಂತಾಮಣಿ.

ಬಹುಮಾನದ ಮೊಬಲಗು ಎಲ್ಲರಿಗೂ ತಾ. 11-5-42 ನಂತರ ರವಾನಿಸಲಾಗುತ್ತೆ. ಈ ಮಧ್ಯೆ, ಆನಂದವಿಹಾರ ನಂ. 21 ಕ್ಕೆ ಅಡ್ಜೆಸ್ಟ್ ಮಾಡಲಿಚ್ಛಿಸುವರು ಹಾಗೆ ಮಾಡಿಸಬಹುದು. ಪುನರ್ವಿಮರ್ಶನಾಪತ್ರ ಬರೆಯುವವರು ತಾ|| 5-5-42 ರೊಳಗೆ ಬರೆಯಬೇಕು. ನಂತರ ಬರತಕ್ಕವುಗಳಿಗೆ ನಿಗಾ ಕೊಡುವುದಿಲ್ಲ. ಪುನರ್ವಿಮರ್ಶನಾ ಪತ್ರಕ್ಕೆ 1 ರೂ. ಫೀಜು ಕಳುಹಿಸಬೇಕು ತಾ|| 5-5-42 ನಂತರ ನಂ. 20 ರ ಕಾಗದಪತ್ರಗಳನ್ನು ನಮ್ಮಲ್ಲಿ ಇಟ್ಟುಕೊಳ್ಳುವುದಿಲ್ಲ.

ಮ್ಯಾನೇಜರ್

ವಿ. ಸೂ — ಬಹು ಅಂದವಾಗಿ ಕೂಪನ್‌ಗಳನ್ನು ಬರೆದು ಕಳುಹಿಸಿದ ಈ ಕೆಳಗೆ ಕಂಡವರಿಗೆ, ತಾವು ಕಳುಹಿಸುವ ನಂ. 21 ರ ಪೇಡ್ ಕೂಪನ್‌ಗಳ ಜೊತೆಗೆ ಒಂದೊಂದು ಉಚಿತ ಕೂಪನ್‌ಗಳನ್ನು ಕಳುಹಿಸಬಹುದು.

ಶ್ರೀ ಶಾಂತಕುಮಾರ್ ಭದ್ರಾವತಿ.

ಶ್ರೀಮತಿ ಲಕ್ಷ್ಮೀಬಾಯಿ ಭದ್ರಾವತಿ.

# ಸ್ಪರ್ಧೆಗಳಿಗೆ ಸಲಹೆಗಳು

( ಯನ್. ವಿ. ರಂಗಸ್ವಾಮಿ )

## ಶ್ರೀ ವಿದ್ಯಾರಣ್ಯ ಪಜಲ್ ನಂ. ೧೨

ಎಡದಿಂದ ಬಲಕ್ಕೆ—1 ವಿಳಾಸ. 3 ಬೆಂಗಳೂರು. 5 ದಾಸಿ. 6 ಧರ್ಮಪತ್ನಿ. 9 ಮನ, ಮರ್ಮ. 10 ಹುದ್ದೆ, ಗದ್ದೆ. 11 ಹಂಪೆ 14 ಜಾತಿ, ರೀತಿ. ನೀತಿ. 17 ಸಂಧಾನ. 19 ರಾಜು. 22 ತರುಣಿ. 23 ಜದಗ್ನಿಮ 24 ಹಣ, ವ್ರಣ, ಋಣ.

ಮೇಲಿನಿಂದ ಕೆಳಕ್ಕೆ— 1 ವಿದ್ಯಾರಣ್ಯ 2 ಸದಾ 4 ರಮಾ 6 ಧನ, ಧರ್ಮ 7 ಪಲಾಂಡು 8 ನಿದ್ದೆ 12 ಧನಂಜಯ 13 ವಿಧಾನ 15 ತಿರುಪತಿ 16 ರುಚಿ, ಶುಚಿ 17 ಸಂದೇಶ, ಸಂದೇಹ 18 ನಗೆ ನಡೆ, ನಯ 20 ನಿಜಾಮು, ಹಜಾಮು 21 ತರುಣ.

## ಆನಂದವಿಹಾರ ನಂ. ೨೧

ಎಡದಿಂದ ಬಲಕ್ಕೆ— 1 ಮಹಾತ್ಮ ಗಾಂಧಿ 6 ಜನ, ಧನ, ಮಾನ, ಜ್ಞಾನ 7 ಗೋವು 8 ನಿರಾಶೆ, ದುರಾಶೆ 10 ನೆಲ. ಜಲ, ಬಲ 11 ಕಲಹ 13 ನಟ, ನಟಿ 17 ಸತ್ಯವಾದಿ.

ಮೇಲಿನಿಂದ ಕೆಳಕ್ಕೆ— 1 ಮಠ ಮತ 2 ಹಾರ 3 ಆತ್ಮ 4 ಗಾಮ 5 ವನಮಾಲ 7 ಗೋಪಾಲ 8 ನಿಧಿ, ದುಡ್ಡು 9 ರಾಜ್ಯ, ರಾಷ್ಟ್ರ, ರಾಜ, ರಾಣಿ 11 ತರಣ 12 ಕಥೆ, ಕಲೆ 14 ಚಾಕು, ಬಾಕು 15 ಪಿತ, ತಾತ, ದಾತ. ನಾತ 16 ದಾದಿ.

# ವಿವಿಧ ವಿಷಯಗಳು

ಈಗ ತಂತಿ ಆಫೀಸಿನಲ್ಲಿ ಕಟಕಟ ಟಿಕ್ ಟಿಕ್ ಶಬ್ದಗಳು ಕೇಳಬರುತ್ತಿರುವವಷ್ಟೆ. ಅದಕ್ಕೆ ಪ್ರತಿಯಾಗಿ ಹಾರ್ಮೋನಿಯಂ ಧ್ವನಿಯು ಕೇಳಬರುವಂತೆ ವೈಜ್ಞಾನಿಕರು ಮಾರ್ಗವನ್ನು ಕಂಡುಹಿಡಿದಿರುವರು. ಸಂಗೀತ ಧ್ವನಿಯು ಕೇಳಬರುವುದರಿಂದ ಆ ಆಫೀಸುಗಳಲ್ಲಿ ಕೆಲಸ ಮಾಡುವವರು ಬೇಜಾರಿಲ್ಲದೆ ಕೆಲಸ ಮಾಡಲು ಅನುಕೂಲವಾಗುತ್ತದೆ.

ಂ ಂ ಂ

ಕಲಕತ್ತಾದಲ್ಲಿ ಹೊರಡುತ್ತಿದ್ದ "ಅಮೃತ ಬಜಾರ್" ಎಂಬ ಇಂಗ್ರೇಜೀ ದೈನಕ ಪತ್ರಿಕೆಯು ಇನ್ನು ಮುಂದೆ ಅಲಹಾಬಾದಿನಿಂದ ಪ್ರಸಿದ್ಧಸಲಾಗುವುದು.

ಂ ಂ ಂ

ಬೊಂಬಾಯಿನಿಂದ ಸುಮಾರು ನಾಲ್ಕೂಕಾಲು ಲಕ್ಷ ಜನರು ಹೋದರೆಂದು ಅಂದಾಜು ಮಾಡಲಾಗಿದೆ. ಅಲ್ಲದೇ ಅರವತ್ತು ಸಾವಿರ ಕೆಲಸಗಾರರು ಊರುಬಿಟ್ಟು ಹೋಗಿದ್ದಾರೆಂದು ತಿಳಿಯುವದು.

ಂ ಂ ಂ

ಐಗುಪ್ತ ದೇಶದ ಹಿಂದಿನ ಒಬ್ಬ ರಾಜಾಧಿರಾಜನ ಸಮಾಧಿಯಲ್ಲಿ 3,500 ವರ್ಷಗಳ ಹಿಂದೆ ಇಡಲ್ಪಟ್ಟ ಧಾನ್ಯವು ಕಂಡು ಬಂದಿದೆ. ಇಷ್ಟು ಹಳೇ ಧಾನ್ಯವಾದರೂ ಅದನ್ನು ನೆಟ್ಟು ಪೈರು ಮಾಡಲು ಪ್ರಯತ್ನಿಸಿದಾಗ ಆ ಬೀಜಗಳು ಮೊಳೆತು ಪೈರಾಗಿ ಫಲಪೂರಿತವಾದುದು ಕಂಡುಬಂದಿತು.

ಂ ಂ ಂ

ಎರಡು ವರ್ಷಗಳ ಹಿಂದೆ ಲಂಡನ್ನಿನಲ್ಲಿ ನಡೆದ ಒಂದು ಮೋಟಾರು ದುರ್ಘಟನೆಯ ಫಲವಾಗಿ ಒಬ್ಬ ಬಾಲಕನ ನಾಲಿಗೆಯು ಪೂರ್ಣರೀತಿಯಲ್ಲಿ ಹೊರಟು ಹೋಯಿತು. ಆತನನ್ನು ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿದಾಗ ನಕಲಿ ನಾಲಿಗೆಯನ್ನು ತಯಾರಿಸಿ ಅದರ ಸ್ಥಾನದಲ್ಲಿ ಸೇರಿಸಿದರು. ಈಗ ಬಾಲನು ಪೂರ್ಣ ಸ್ವಸ್ಥನಾಗಿರುವನು. ಆ ವೈಜ್ಞಾನಿಕ ನಾಲಿಗೆಯು ಸ್ವಾಭಾವಿಕ ನಾಲಿಗೆಯಂತೆಯೇ ಎಲ್ಲಾ ಕೆಲಸಗಳಿಗೂ ಉಪಯೋಗವಾಗುತ್ತಿದೆ. ವೈಜ್ಞಾನಿಕ ಸಂಶೋಧನೆಗಳಲ್ಲಿ ಇದು ಅತಿ ಆಶ್ಚರ್ಯಕರವಾದದಾಗಿದೆ.

ಂ ಂ ಂ

ಮೊಟ್ಟೆಗಳನ್ನು ತಿನ್ನುವ ಭಟ್ಟ—ಪ್ರಪಂಚದಲ್ಲಿ ಎಂಥೆಂಥಾ ಉಡಾಳಭಟ್ಟರಿರುವರೆಂದರೆ ಆಶ್ಚರ್ಯವನ್ನುಂಟುಮಾಡುವುದು. ಸಂಯುಕ್ತ ರಾಷ್ಟ್ರದ ಮ್ಯಾಕ್ಸ್ ಹಾನೆಲ್ ಮಹೋದಯನು ಅವರಲ್ಲಿ ಒಬ್ಬನು ಆತನು ಒಂದು ಬಾರಿ 10 ನಿಮಿಷಗಳಲ್ಲಿ 5-5 ಮೊಟ್ಟೆಗಳಂತೆ ನುಂಗಿದನಾಗಲಿ ಆತನಿಗೆ ತೇಗು ಕೂಡಾ ಬರಲಿಲ್ಲ.

"ಬಿ" ಸೆಕ್ಷನ್ ತಪ್ಪದೆ ಓದಿ.

# ಶ್ರೀ ವಿದ್ಯಾರಣ್ಯ ಪಜಿಲ್ ನಂ. 12, ಬಳ್ಳಾರಿ.

## — ಸ್ಪೆಷಲ್ ಬಹುಮಾನಗಳು —

ಈ ಪಜಲಿನ ಕೂಪನ್ನುಗಳು 12 ಕ್ಕಿಂತಲೂ ಹೆಚ್ಚಿಗೆ ಕಳಿಸಿದವರಿಗೆ ತಲಾ ಒಂದು ಸುಂದರವಾದ ಮನಿಪರ್ಸ್. 50 ಕ್ಕಿಂತಲೂ ಹೆಚ್ಚಿಗೆ ಕಳಿಸಿದವರಿಗೆ " ಕನ್ನಡ ಅರ್ಥಕೋಶ ' [ನಿಘಂಟು] 100 ಕ್ಕಿಂತಲೂ ಹೆಚ್ಚಿಗೆ ಕಳುಹಿಸಿದವರಿಗೆ ಬ್ಲಾಕ್‌ಬರ್ಡ್ ಅಥವಾ ರಾಜಾಪೆನ್, ಎಲ್ಲರಿಗಿಂತಲೂ ಹೆಚ್ಚಿಗೆ ಕಳುಹಿಸಿದವರಿಗೆ ಉತ್ತಮವಾದ ಕೈಗಡಿಯಾರ ( ರಿಸ್ಟ್ ವಾಚ್ ) ಬಹುಮಾನಗಳನ್ನು ಕೊಡಲಾಗುವುದು.

**ಪ್ರಥಮ ಬಹುಮಾನ**

ಸರಿಯಾದ ಉತ್ತರವಿದ್ದವರಿಗೆ ರೂ. ೨೫೦
೧ ತಪ್ಪಿದ್ದವರಿಗೆ ರೂ. ೧೫೦
೨, ೩ ತಪ್ಪಿದ್ದವರಿಗೆ ರೂ. ೧೫೦
ಹೆಚ್ಚಿಗೆ ಕೂಪನ್ ಕಳುಹಿಸಿದವರಿಗೆ ರೂ. ೧೦೦
ಸ್ಪೆಷಲ್ ಬಹುಮಾನಗಳಿಗಾಗಿ ರೂ. ೩೫೦

ರೂಪಾಯಿ
**1000**
ಬಹುಮಾನ

ಇದರ ಸರಿಯಾದ ಉತ್ತರವನ್ನು 20—5—42 ನೆ ತಾಯಿನಾಡು ಪತ್ರಿಕೆಯಲ್ಲಿ ಪ್ರಕಟಿಸಲಾಗುವದು.

ಮಾರ್ಗದರ್ಶಿನಿಯನ್ನು ತತ್ಕಾಲಿಕವಾಗಿ ನಿಲ್ಲಿಸಿದ್ದಾರೆ. ಆದ್ದರಿಂದ 9 ಪೈ ಸ್ಟಾಂಪು ಹೆಚ್ಚಿಗೆ ಕಳುಹಿಸಿದವರಿಗೆ ಮಾತ್ರ ಪ್ರೈಜ್‌ಲಿಸ್ಟನ್ನು ಮುಂದಿನ ಪಜಲಿನ ಬಿಡಿಕೂಪನ್ನುಗಳೊಡನೆ 25-5-42 ನೇ ದಿನ ಕಳುಹಿಸುತ್ತೇವೆ.

4 ಕ್ಕಿಂತಲೂ ಕಡಿಮೆ ಕೂಪನ್ನುಗಳನ್ನು ಸ್ವೀಕರಿಸುವದಿಲ್ಲ.

ನಿಮ್ಮ ಗ್ರಾಮದಲ್ಲಿ ಪೋಸ್ಟು ಮಾಡಬಹುದಾದ ಕೊನೆಯ ದಿನ 14—5—42. ಆದರೂ ಸಮಯಕ್ಕೆ ತಲಪದವುಗಳನ್ನು ನಿರಾಕರಿಸಲಾಗುತ್ತೆ.

ಪ್ರವೇಶದ ರುಸುಮು
4 ಕೂಪನ್ನುಗಳಿಗೆ ರೂ. 1—0—0
1 ಕೂಪನ್ನಿಗೆ ರೂ. 0—4—0

| | | | | | | | | |
|---|---|---|---|---|---|---|---|---|
| 1 ವಿ | ಛಾ | 2 | ■ | 3 | ಂ | ಗ | ಜೂ | ರು |
| ದ್ಯಾ | 4 ರ | 5 ದಾ | | ■ | 6 ಧ | ರ್ಮ | 7 | ಶ್ರಿ |
| ರ | | ■ | 8 | 9 ಮ | | ■ | ಲಾ | ■ |
| ಣ್ಯ | ■ | 10 | ದ್ವೆ | ■ | ■ | 11 ಹ | | ಪೆ |
| ■ | 12 ಧ | 13 ವಿ | ■ | 14 | 15 ತಿ | ■ | ಡು | 16 |
| 17 ಸ | | | 18 ನ | ■ | 19 | ಜು | ■ | ಚಿ |
| ಂ | ನ | ನ | | 20 | ಪ | ■ | 21 ತ | ■ |
| ದೇ | ಯ | ■ | ■ | ಜಾ | ತಿ | 22 ತ | | ಣ |
| | 23 | ದ | | ಮ | ■ | 24 | ಣ | ■ |

### ಆಧಾರಗಳು

ಎಡದಿಂದ ಬಲಕ್ಕೆ— 1 ಕೆಲ ಪೋಟೀದಾರರು "—" ಸರಿಯಾಗಿ ಬರೆಯದ್ದರಿಂದ ನಾವು ಕಳಿಸಿದ ಬಹುಮಾನ ಧನ ವಾಪಸ್ಸು ಬರುತ್ತದೆ. 3 ಮೈಸೂರು ಸಂಸ್ಥಾನದ ಮುಖ್ಯ ಪಟ್ಟಣ. 5 ಸೇವಕಿ. 6 ಶಾಸ್ತ್ರರೀತ್ಯಾ ಮದುವೆಯಾದ ಹೆಂಡತಿ. 9 ಪರರ "—" ತಿಳಿಯುವುದು ಬಹು ಕಷ್ಟವಲ್ಲವೇ? 10 ಕಳೆದುಕೊಂಡ "—"ಯನ್ನು ಪುನಃ ಸಂಪಾದಿಸುವುದು ಸಾಧ್ಯವೇ? 11 ಶಿಥಿಲವಾದ ವಿಜಯನಗರ ಸಾಮ್ರಾಜ್ಯದ ಮುಖ್ಯ ಪಟ್ಟಣ. 14 ಬಿಟ್ಟವನನ್ನು ಸಂಘವು ಬಹಿಷ್ಕರಿಸಬಾರದೇಕೆ? 17 ರಾಜಿ ಮಾಡಿಕೊಳ್ಳುವದು. 19 ಪೋಟೀದಾರರು ಕೂಪನ್ನುಗಳ ಮೇಲೆ "—" ಮಾಡಬೇಕು. 22 ಯೌವನವತಿ. 23 ಜನುದಗ್ನಿ (ಕಲಸಿಹೋಗಿವೆ). 24 ಇದರ ಬಾಧೆಯನ್ನು ಅನುಭವಿಸಿದವರು ಮಾತ್ರ ಬಲ್ಲರು.

ಮೇಲಿನಿಂದ ಕೆಳಕ್ಕೆ— 1 ಈ ಹೆಸರಿನ ಪಜಲುಗಳಲ್ಲಿರುವ ಆಧಾರಗಳು ಚಮತ್ಕಾರವಾಗಿಯೂ ಪೋಟೀದಾರರ ಮನೋವಿಕಾಸಗೊಳಿಸುವುದಾಗಿಯೂ ಇರುತ್ತವೆಂದು ಅನೇಕರು ಪ್ರಶಂಸೆಮಾಡಿದ್ದಾರೆ. 2 ಯಾವಾಗಲೂ. 4 ಲಕ್ಷ್ಮೀದೇವಿಗೆ ಈ ಹೆಸರುಂಟು 6 ಇದು ಕೊರತೆಯಾದ ವ್ಯಾಪಾರ ಸಂಸ್ಥೆಯು ಯಶಸ್ವಿಯಾಗದು. 7 ಈರುಳ್ಳಿ ( ಉರಳೀಗಡ್ಡಿ ) 8 ನಿದ್ರಾ ( ತತ್ಸಮ )12 ಧನಂಜಯ ( ಕಲಸಿಹೋಗಿದೆ ) 13 ನಿಯಮ. 15 ಪ್ರಸಿದ್ಧಕ್ಷೇತ್ರ. 16 ಕೆಲವು ಹೋಟೆಲುಗಳಲ್ಲಿ ಪದಾರ್ಥಗಳು "—" ಯಾಗಿರುವದಿಲ್ಲ. 17 ಇದು ಬಂದೊಡನೆಯೇ ಮೂಲಕಾರಣವನ್ನು ತಿಳಿಯುವುದು ಜಾಣರ ಲಕ್ಷಣ. 18 ಯೋಗ್ಯರೀತಿಯಿಂದ ತೋರ್ಪಡಿಸಿದಲ್ಲಿ ಇದು ಸ್ತ್ರೀಯರಿಗೆ ಭೂಷಣವಾಗುತ್ತದೆ. 20 ಈತನ ಮೇಲಿರುವ ದ್ವೇಷವನ್ನು ಮುಖಾಮುಖಿಯಾಗಿ ಹೇಳುವುದು ಅಪಾಯಕರ. 21 ನಮ್ಮ ಪಜಲು ನಂ. 12 ರಲ್ಲಿ ವಿಶೇಷ ಬಹುಮಾನಹೊಂದಲು ಯೋಗ್ಯ "—" ( ಸಮಯ )ಎಂದಿದೆ

**ಸೂಚನೆ—** ಎಲ್ಲರೂ ನಮ್ಮ ಸಂಸ್ಥೆಯ ನಿಬಂಧನೆಗಳಿಗೆ ಒಳಪಟ್ಟಿರಬೇಕು. ಈ ಪಜಲಿನ ಎಲ್ಲಾ ವಿಷಯದಲ್ಲೂ ಮ್ಯಾನೇಜರ್ ಮಾಡುವ ನಿರ್ಣಯವೇ ಕೊನೆಯದು. ವಾದವಿವಾದಕ್ಕೆ ಆಸ್ಪದವಿಲ್ಲ. ರುಸುಮು ಮತ್ತು ಕೂಪನ್ನುಗಳನ್ನು ಈ ಅಡ್ರೆಸ್ಸಿಗೆ ಕಳುಹಿಸಬೇಕು

**ಮ್ಯಾನೇಜರ್ :—ವಿದ್ಯಾರಣ್ಯ ಪಜಿಲ್ಸ್, ಕಂಬಳಿ ಬಜಾರ್, ಬಳ್ಳಾರಿ.**

## ವಿಶೇಷ ಸೂಚನೆ

"ಶ್ರೀ ವಿದ್ಯಾರಣ್ಯರ" ಸ್ಮಾರಕವಾಗಿ ಪ್ರತಿಯೊಬ್ಬ ಪೋಟೀದಾರನಿಗೂ ಯಾವುದೋ ಒಂದು ವಸ್ತುರೂಪವಾಗಿ ಬಹುಮಾನವನ್ನು ಸಲ್ಲಿಸಬೇಕೆಂಬ ಕುತೂಹಲದಿಂದ ಈ ಪಜಲಿನಲ್ಲಿ ಅಂಥ ಅವಕಾಶವನ್ನು ಕೊಡಲಾಗಿದೆ. ಈ ಸದವಕಾಶವನ್ನು ಪೋಟೀದಾರರೆಲ್ಲರೂ ಉಪಯೋಗಿಸಿಕೊಂಡು ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

ಬಿಡಿ ಕೂಪನ್ನುಗಳು ಉಚಿತವಾಗಿ ಕಳುಹಿಸಲಾಗುತ್ತೆ.

Edited, Printed & published by M.S. Krishna Rao, at the Satyavadi Press Chamaraja Agrahar, Mysore.